ನಂ.925/2025

**ಪಿ. ಡಬ್ಲ್ಯೂ: 1**

**( ಇಂದು ದಿಃ 17/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಸಿಪಿಪಿ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 28 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಕಳೆದ 03 ವರ್ಷಗಳಿಂದ ಸಹಾಯಕ ಕಾರ್ಯನಿರ್ವಾಹಕನಾಗಿ ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ಆರೋಪಿ ಸಾಲದ ಅರ್ಜಿಯನ್ನು ದಿ ಃ24.01.2024 ರಂದು ಸಲ್ಲಿಸಿದ್ದು ಆರೋಪಿಗೆ ಸಾಲವನ್ನು ದಿಃ 29.01.2024 ರಂದು ಮಂಜೂರಿ ಮಾಡಲಾಗಿದೆ. ಸದರಿ ಪ್ರಕರಣದಲ್ಲಿ ಅಧಿಕಾರವನ್ನು ನನಗೆ ನಿರ್ದೇಶಕ ಮಂಡಳಿಯವರು ನೀಡಿರುತ್ತಾರೆ . ಠರಾವಿನ ಯಥಾ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಮೂಲ ಠರಾವನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಸಾಲ ನೀಡುವ ಮೊದಲು ಸಾಲದ ಅರ್ಜಿ ,ಡಿ ಪಿ ನೋಟ್ , ರಶೀದಿ , ಕರಾರುಪತ್ರಗಳನ್ನು ಪಡೆದಿರುತ್ತೇವೆ. ಆರೋಪಿಯಿಂದ ಭದ್ರತೆಗಾಗಿ ಚೆಕ್ಕನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ 60 ತಿಂಗಳ ಸಾಲ ನೀಡಿದ್ದು ಆರೋಪಿ ಯಾವುದೇ ಕಂತನ್ನು ತುಂಬಿಲ್ಲಾ. ಸಾಲ ಕಟ್ಟು ಬಾಕಿ ಆದಾಗ ಆರೋಪಿಗೆ ನೊಟೀಸು ನೀಡಿದ್ದು ಯಾವ ದಿನಾಂಕಕ್ಕೆ ನೊಟೀಸನ್ನು ನೀಡಿದ್ದ ಬಗ್ಗೆ ದಾಖಲೆ ನೋಡಿ ಹೇಳಬಹುದು. ಯಾವುದೇ ನೊಟೀಸು ನೀಡದೇ ಇದ್ದ ಕಾರಣ ಸದರಿ ನೊಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲ. ಸಾಲ ಮರುಪಾವತಿಗಾಗಿ ದಿಃ 13.03.2025 ರಂದು ಸಾಲದ ವಸೂಲಿಗೆ ಹೋದಾಗ ಆರೋಪಿಯು ಲೆಕ್ಕಾಚಾರ ತಿಳಿದುಕೊಂಡು ಬ್ಯಾಂಕಿಗೆ ಬಂದು ಚೆಕ್ಕನ್ನು ನೀಡಿರುತ್ತಾರೆ. ಚೆಕ್ಕನ್ನು ಆರೋಪಿ ಬರೆದು ತಂದಿದ್ದರು. ಚೆಕ್ಕಿನ ಮೇಲೆ ಇರುವ ಬರವಣಿಗೆ ಮತ್ತು ಶಾಹಿಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ ಎಂದರೆ ಸರಿಯಲ್ಲ. ಚೆಕ್ಕನ್ನು ಆರೋಪಿ ಬರೆದಿದ್ದೇ ಇಲ್ಲಾ ನಾವೇ ಬರೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಸಾಲ ಮರುಪಾವತಿಗಾಗಿ ಯಾವುದೇ ಚೆಕ್ಕನ್ನು ನೀಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತನು ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ

ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**